




ಜಪದ ಬಾವಿ





ದೊರೆತಿದ್ದು, ಇಲ್ಲಿ ಬೌದ್ಧ, ಜೈನ ಮತ್ತು ಹಿಂದೂ ಧರ್ಮಗಳು ಅಸ್ತಿತ್ವದಲ್ಲಿದ್ದವೆಂದು ತಿಳಿದುಬರುತ್ತದೆ. ಡಂಬಳದಲ್ಲಿ ಈ ಮೊದಲೇ ಇದ್ದ ಜಿನಾಲಯವೊಂದಕ್ಕೆ ಚಾಲುಕ್ಯ ದೊರೆ ಮೊದಲನೇ ಸೋಮೇಶ್ವರ ದತ್ತಿ ಕೊಟ್ಟಿರುವುದಾಗಿ ಕ್ರಿ.ಶ 1059ರ ಶಾಸನದಲ್ಲಿ ಉಲ್ಲೇಖವಿದೆ. 1095ರ ಶಾಸನದಲ್ಲಿ, ಹದಿನಾರು ಜನ ವರ್ತಕರು ಬೌದ್ಧ ದೇವತೆ ತಾರಾದೇವಿಯ ದೇಗುಲ ಕಟ್ಟಲು ಸಹಾಯ ಮಾಡಿದರೆಂದು ಗೊತ್ತಾಗುತ್ತಾದರೂ, ಡಂಬಳದ ಪರಿಸರದಲ್ಲಿ ದೇವಾಲಯದ ಕುರುಹುಗಳು ಕಾಣಸಿಗುವುದಿಲ್ಲ.

ಕಲ್ಯಾಣಿ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಲ್ಲಿರುವ ದೊಡ್ಡಬಸಪ್ಪ ದೇವಾಲಯವು 32 ಕೋನಗಳ (ಮುಖಗಳ) ನಕ್ಷತ್ರದಂತೆ ಕಾಣಿಸುತ್ತದೆ. ಪೂರ್ವಾಭಿಮುಖವಾಗಿ ದೇವಾಲಯ ನಿರ್ಮಿಸಲಾಗಿದ್ದು, ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ದ್ವಾರಗಳನ್ನು ಹೊಂದಿದೆ.

ಪ್ರವಾಸಿಗರಿಗೆ ಮೊದಲಿಗೆ ಸಿಗುವುದು ದಕ್ಷಿಣ ದ್ವಾರ. ಐದಾರು ಮೆಟ್ಟಿಲು ಹತ್ತಿ ಹೋದರೆ, ದಕ್ಷಿಣ ದ್ವಾರದ ಮುಖ ಮಂಟಪ ಸಿಗುತ್ತದೆ. ಇಲ್ಲಿ ಎರಡು ಕಂಬಗಳಿದ್ದು, ಕಂಬಗಳ ಕೆಳಭಾಗದ ಪಟ್ಟಿಯಲ್ಲಿ ಆನೆಗಳ ಸಾಲನ್ನು ಕೆತ್ತಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳ ಮಧ್ಯದಲ್ಲಿ ಗರ್ಭಗುಡಿ ಕಡೆಗೆ ಮುಖ ಮಾಡಿ ಕುಳಿತಿರುವ ಪುಟ್ಟ ನಂದಿಯ ವಿಗ್ರಹವಿದೆ. ಕಂಬಗಳ ಮಧ್ಯಭಾಗವು ದುಂಡಗಿನ ಆಕೃತಿಯುಳ್ಳದ್ದಾಗಿದ್ದು ನಮ್ಮ ಮುಖ ಕಾಣುವಷ್ಟು ನಯಗೊಳಿಸಲಾಗಿದೆ.

ದೇವಾಲಯದ ಪೂರ್ವ ಭಾಗದಲ್ಲಿಯೂ ಮುಖ ಮಂಟಪವಿದ್ದು ಎರಡು ಕಂಬಗಳಿವೆ. ಕಂಬಗಳ ತಳಭಾಗದಲ್ಲಿ ಗೋಪುರದಂತಹ ಕೆತ್ತನೆಗಳಿವೆ. ಕಂಬಗಳು ಹಲವು ಕೋನಗಳಿಂದ ಕೂಡಿದ ಚೂಪಾದ ಚಪ್ಪಟೆ ರಚನೆಗಳನ್ನು ಹೊಂದಿವೆ. ಮುಖ ಮಂಟಪದ ಮುಂದೆ ಕಪ್ಪುಶಿಲೆಯಿಂದ ನಿರ್ಮಿಸಲಾದ ಸುಮಾರು ಆರು ಅಡಿ ಎತ್ತರದ ಬೃಹತ್ ಗಾತ್ರದ ನಂದಿಯ ಏಕಶಿಲಾ ವಿಗ್ರಹವು ಗರ್ಭಗೃಹದ ಕಡೆಗೆ ಮುಖಮಾಡಿದೆ. ನಂದಿಯ ಕೊರಳಲ್ಲಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಗಂಟೆಗಳ ಸಾಲು ಹಾಗೂ ಸರಗಳಿವೆ. ನಂದಿ ಮಂಟಪದ ಸಮೀಪದಲ್ಲಿ ಆಳೆತ್ತರದ ಕಲ್ಲಿನ ಶಾಸನವಿದೆ.

ಪೂರ್ವ, ದಕ್ಷಿಣ ದ್ವಾರ ಮತ್ತು ಗರ್ಭಗುಡಿಗೆ ಏಳು ಪಟ್ಟಿಕೆಗಳ ಬಾಗಿಲುವಾಡವಿದ್ದು ಪ್ರತಿ ಪಟ್ಟಿಕೆಯಲ್ಲೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಲತಾ ಸುರುಳಿಗಳು, ಗಂಡು, ಹೆಣ್ಣಿನ ವಿವಿಧ ಭಂಗಿಗಳ ನೃತ್ಯ ಶಿಲ್ಪಗಳು, ನಾಗ ನಾಗಿಣಿಯರು ಬೆಸೆದುಕೊಂಡಿರುವ ಶಿಲ್ಪಗಳು, ಇತರೆ ಚಿಕಣಿ ಶಿಲ್ಪಗಳು ಹಾಗೂ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ.

ಗರ್ಭಗುಡಿಯಲ್ಲಿ ಎತ್ತರವಾದ ಎರಡು ಹಂತಗಳ ಪಾಣಿಪೀಠದ ಮೇಲಿರುವ ಶಿವಲಿಂಗ (ಅಜ್ಜಮೇಶ್ವರ) ಆಕರ್ಷಕವಾಗಿದ್ದು ದೊಡ್ಡ ಗಾತ್ರದಲ್ಲಿದೆ. ಶಿವಲಿಂಗದ ಮೇಲೆ ಬೆಳಕು ಬೀಳುವಂತೆ ವ್ಯವಸ್ಥೆ ಮಾಡಲಾಗಿದೆ. ಗರ್ಭಗುಡಿಯ ಮೇಲ್ಭಾಗದಿಂದ ಶಿಖರವನ್ನು ನಕ್ಷತ್ರಾಕಾರದಲ್ಲಿ ನಿರ್ಮಿಸಲಾಗಿದ್ದು ಒಟ್ಟು 24 ಕೋನಗಳನ್ನು ಹೊಂದಿದೆ. 24 ಕೋನಗಳು ಮೇಲೇರುತ್ತಾ ಹೋದಂತೆ ವ್ಯಾಸದಲ್ಲಿ ಕಡಿಮೆಯಾಗುತ್ತವೆ. ಕೋನಗಳು ಶಿಖರದ ತುದಿಯಲ್ಲಿ ಸಂಧಿಸದೆ ಅರ್ಧದಲ್ಲೇ ನಿಂತಿದ್ದು, ಶಿಖರದ ಮೇಲ್ಭಾಗ ಚಪ್ಪಟೆಯಾಗಿದೆ.

ಈ ಗೋಪುರವು ಚಾಲುಕ್ಯರ ವಾಸ್ತುಶೈಲಿಯ ಪ್ರಬುದ್ಧತೆಗೆ ಸಾಕ್ಷಿಯಾಗಿದ್ದು, ವಿನ್ಯಾಸಗಾರರ ಪ್ರೌಢಿಮೆಗೆ ತಲೆಬಾಗಲೇಬೇಕು. ಗರ್ಭಗುಡಿಯು ಸಪ್ತ ಶಾಖೆಗಳ ಬಾಗಿಲುವಾಡ ಹೊಂದಿದ್ದು, ಶಾಖೆಗಳು ನೃತ್ಯಶಿಲ್ಪಗಳಿಂದ ಕೂಡಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದ್ದು, ಮಕರ ತೋರಣ ಕಲಾತ್ಮಕತೆಯಿಂದ ಕೂಡಿದೆ. ಬಾಗಿಲುವಾಡದ ಮುಂದೆ ಕೆತ್ತಲಾಗಿರುವ ಹೂವಿನ ಆಕೃತಿ ಹಾಗೂ ಅದರ ಸುತ್ತಲೂ ಇರುವ ರಚನೆ ಆಕರ್ಷಕವಾಗಿವೆ.

ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಆಧುನಿಕ ಕಡಚಲು (Lathe) ಯಂತ್ರಗಳಿಲ್ಲದ ಆ ಕಾಲದಲ್ಲಿ ಹಲವು ಹಂತಗಳಲ್ಲಿ ಕೆತ್ತಲಾಗಿರುವ ಹಲವು ಕೋನಗಳುಳ್ಳ ಚಪ್ಪಟೆಯ ರಚನೆಗಳು ಅಂದಿನ ಶಿಲ್ಪಿಗಳ ಕಲಾ ನೈಪುಣ್ಯಕ್ಕೆ ಸಾಕ್ಷಿ. ಭುವನೇಶ್ವರಿಯಲ್ಲಿ ಸುಂದರವಾದ ಕೆತ್ತನೆಯಲ್ಲಿ ಅರಳಿರುವ ಶಿಲಾಪದ್ಮ ವಿನ್ಯಾಸ ಮನಮೋಹಕ.

ದೇವಾಲಯದ ತಳವಿನ್ಯಾಸದಲ್ಲಿ ಸಿಂಹ, ಕಾಲ್ಪನಿಕ ಪ್ರಾಣಿ ವ್ಯಾಳಿಗಳ ಸಾಲನ್ನು ಕೆತ್ತಲಾಗಿದೆ. ಅರ್ಧಮಂಟಪಕ್ಕೆ ಹತ್ತಿರವಿರುವ ಕಂಬಗಳ ಮೇಲೆ ಕಾಳಿ, ಭೈರವ, ಭೈರವಿ, ವರಾಹ ಮುಂತಾದ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಹೊರ ಭಿತ್ತಿಗಳಲ್ಲಿ ಆಲಂಕಾರಿಕ ಗೋಪುರಗಳಿದ್ದು, ಪ್ರತೀ ಗೋಪುರದ ತಳಭಾಗದಲ್ಲಿ ಜೋಡಿ ಆನೆಗಳು ಕಾದಾಡುವ ಶಿಲ್ಪಗಳಿವೆ.

ದೊಡ್ಡ ಬಸಪ್ಪ ದೇವಾಲಯದ ಸಮೀಪದಲ್ಲಿ ಸೋಮೇಶ್ವರ ದೇವಾಲಯವಿದೆ. ಸುಮಾರು ಒಂದು ಕಿ.ಮೀ. ದೂರದಲ್ಲಿ ಸುಂದರ ಕಲ್ಯಾಣಿಯಿದೆ. ಕಲ್ಯಾಣಿ ಸುಮಾರು 20 ಅಡಿಗಳಷ್ಟು ಆಳವಿದ್ದು ಸುತ್ತಲೂ ಚಿಕ್ಕ ಮಂಟಪಗಳಿವೆ. ಸಾಧು ಸಂತರು ಕಲ್ಯಾಣಿಯಲ್ಲಿ ಸ್ನಾನ ಮಾಡಿದ ನಂತರ ಮಂಟಪದಲ್ಲಿ ಕುಳಿತು ಜಪ ಮಾಡುತ್ತಿದ್ದರಂತೆ. ಹಾಗಾಗಿ ಸುಂದರವಾದ ಈ ಕಲ್ಯಾಣಿಯನ್ನು 'ಜಪದಬಾವಿ' ಎಂದು ಸ್ಥಳೀಯರು ಕರೆಯುತ್ತಾರೆ.

ಇವಿಷ್ಟೇ ಅಲ್ಲದೆ, ಜಪದ ಬಾವಿಗೆ ಹೋಗುವ ದಾರಿಯಲ್ಲಿ ಕಾಣಸಿಗುವ ಸುಣ್ಣದ ಭಟ್ಟಿಗಳು ಹಾಗೂ ಕೋಟೆಯ ಶಿಥಿಲವಾದ ಗೋಡೆಯಲ್ಲಿರುವ ಗಣಪತಿ ದೇವರ ಗುಡಿಯೂ ಡಂಬಳ ಗ್ರಾಮದ ವೈಶಿಷ್ಟ್ಯಗಳ ಸಾಲಿನಲ್ಲಿವೆ. ನಗರದ ಜನಜಂಗುಳಿಯಿಂದ ದೂರವಿದ್ದು, ಸುಂದರವಾದ ಹಳ್ಳಿ ಪರಿಸರದಲ್ಲಿ ಅರ್ಧದಿನ ಕಳೆಯುವುದರೊಂದಿಗೆ ಕಲ್ಯಾಣಿ ಚಾಲುಕ್ಯರ ಶಿಲ್ಪಕಲಾ ವೈಭವವನ್ನು ಕಣ್ತುಂಬಿಕೊಳ್ಳಲು ಬಯಸುವವರಿಗೆ 'ಡಂಬಳ' ಗ್ರಾಮ ಹಾಗೂ ದೇವಾಲಯಗಳು ಸೂಕ್ತವೆನಿಸುತ್ತವೆ.

ಪ್ರತಿಕ್ರಿಯಿಸಿ: feedback@sudha.co.in